ದಿನಾಂಕ: 06-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ವಾದಿ ಪರ ವಕೀಲರಿಂದಃ**

8. ನನ್ನ ತಾಯಿ ಬಳೆ ವ್ಯಾಪಾರ ಮಾಡುತ್ತಿದ್ದರು ಎಂದು ತೋರಿಸಲು ನನ್ನ ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆ ಇರುವುದಿಲ್ಲ ಎಂದರೆ ಸರಿ. 1985 ರಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಪತ್ರ ಆದಾಗ ನನ್ನ ತಾಯಿಗೆ ವೈಯಕ್ತಿಕ ಆದಾಯ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ಸಿ.ಟಿ.ಎಸ್.ನಂ.2138/ಬಿ1/ಎ ನಲ್ಲಿಯ ವಾದಿಯ ಪಾಲನ್ನು ಮುಳುಗಿಸುವ ಉದ್ದೇಶದಿಂದ ನನ್ನ ತಾಯಿ ಬಳೆ ವ್ಯಾಪಾರ ಮಾಡಿ ಸದರಿ ಆಸ್ತಿ ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

9. ನವೆಂಬರ್-2015 ರಲ್ಲಿ ನಮ್ಮ ತಂದೆ ಹಜ್ಜ ಯಾತ್ರೆಗೆ ಹೋಗಿರುತ್ತಾರೆ ಎಂದರೆ ಸರಿ. ಡಿಸೆಂಬರ್-2015 ರಲ್ಲಿ ಹಜ್ಜ ಯಾತ್ರೆಗೆ ಹೋದಾಗ ನನ್ನ ತಂದೆ ಹೃದಯಘಾತ ಆಗಿ ನನ್ನ ತಂದೆ ಅಲ್ಲಿಯೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ಹಜ್ಜನಿಂದ ನಮ್ಮ ತಂದೆಯ ಶವ ತಂದು ಗೋಕಾಕನಲ್ಲಿ ನಮ್ಮ ತಂದೆಯ ಅಂತ್ಯಕ್ರೀಯೆ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ಅಂತ್ಯಕ್ರೀಯೆ ಹಜ್ಜನಲ್ಲಿಯೆ ಆಗಿರುತ್ತದೆ.

10. 1ನೇ ಪ್ರತಿವಾದಿ ವಿಧವಾ ವೇತನ ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ಸದರಿ ವೇತನ ಸಿಂಡಿಕೇಟ ಬ್ಯಾಂಕ ಈಗಿನ ಕೆನರಾ ಬ್ಯಾಂಕನಲ್ಲಿ ಜಮಾ ಆಗುತ್ತದೆ. ನನ್ನ ತಾಯಿಗೆ ಎಷ್ಟು ಪಿಂಚಣಿ ಬರುತ್ತದೆ ಎಂದು ನಾನು ಕೇಳಿಲ್ಲ. ನನ್ನ ತಂದೆಯ ಮರಣಾ ನಂತರ ನನ್ನ ತಾಯಿ ಪಿಂಚಣಿ ಪಡೆಯುತ್ತಿದ್ದಾರೆ. ಪಿಂಚಣಿ ಪಡೆಯಲು ನಮ್ಮ ತಂದೆಯ ಮರಣ ಪ್ರಮಾಣ ಪತ್ರ ಕೊಟ್ಟಲ್ಲಿ ಮಾತ್ರ ಪಿಂಚಣಿ ಮಂಜೂರಾಗುತ್ತದೆ ಎಂದರೆ ಸರಿ. ನನ್ನ ತಂದೆಯ ಜೊತೆಗೆ ಹಜ್ಜಗೆ ನನ್ನ ತಾಯಿಯು ಸಹ ಹೋಗಿದ್ದರು, ನನ್ನ ತಾಯಿ ವಾಪಸ ಬರುವಾಗ ಹಜ್ಜನಿಂದ ಎನ್.ಓ.ಸಿ ಮತ್ತು ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ತೆಗೆದುಕೊಂಡು ಬಂದಿದ್ದರು. ನನ್ನ ತಂದೆಯ ಮರಣ ಪ್ರಮಾಣ ಪತ್ರ ಹಾಜರ ಮಾಡಲು ತೊಂದರೆ ಇರುವುದಿಲ್ಲ.

11. ನನ್ನ ಲಿಖಿತ ಹೇಳಿಕೆ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮ್ಮ ತಂದೆ ದಿನಾಂಕ 13/02/2015 ರಂದು ಗೋಕಾಕನಲ್ಲಿ ಮೃತಪಟ್ಟಿದ್ದಾರೆ ಎಂದು ನಾನು ಬರೆಯಿಸಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮ್ಮ ತಂದೆ ಹಜ್ಜನಲ್ಲಿ ತೀರಿಕೊಂಡಿದ್ದರೂ ಸಹ ಗೋಕಾಕನಲ್ಲಿ ತೀರಿಕೊಂಡಿದ್ದಾರೆ ಎಂದು ಹೇಳಿದ್ದರೂ ಸಹ ಹೇಳಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ನನ್ನ ತಂದೆಯ ತಾಯಿಯ ಹೆಸರು ಗುಡುಮಾಬಿ. ಸದರಿ ಗುಡುಮಾಬಿ ಇವರು ಡಿಸೆಂಬರ್-2000 ನಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ.

ಗುಡುಮಾಬಿ ಇವರು ತಮ್ಮ ಜೀವಿತ ಕಾಲದಲ್ಲಿ ಗೋಕಾಕಿನ ಗಾಂಧಿ ಮೈದಾನಲ್ಲಿ ಅಕ್ಕಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಗಾಂಧಿ ಮೈದಾನ ಗೋಕಾಕಿನ ಮಾರುಕಟ್ಟೆ ಎಂದರೆ ಸರಿ.

13. ನಮ್ಮ ತಂದೆ ಪ್ರತಿವಾದಿ 2 ರಿಂದ 6 ರವರು ಹುಟ್ಟಿದ ನಂತರ ನನ್ನ ತಾಯಿಯ ಮಾತು ಕೇಳಿ ವಾದಿಗೆ ನಿರ್ಲಕ್ಷ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಸಹ ವಾದಿಯ ಯೋಗಕ್ಷೇಮ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯ ಯೋಗಕ್ಷೇಮವನ್ನು ಅವರ ಅಜ್ಜಿ ಗುಡುಮಾಬಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ವಾದಿ ತನ್ನ ಉಪಜೀವನಕ್ಕಾಗಿ ಮತ್ತು ಶಿಕ್ಷಣಕ್ಕಾಗಿ ಅವರ ಅಜ್ಜಿಯಿಂದ ಅಕ್ಕಿ ಪಡೆದು ಗಾಂಧಿ ಮೈದಾನದಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿ ಮಾಡುತ್ತಿದ್ದ ವ್ಯಾಪಾರದ್ಲಿ ತನ್ನ ಶಿಕ್ಷಣದ ಖರ್ಚನ್ನು ತೆಗೆದು ಉಳಿದ ದುಡ್ಡನ್ನು ತೆಗೆದು ಇಡುತ್ತಿದ್ದರು ಎಂದರೆ ಸರಿಯಲ್ಲ.

14. ವಾದಿ ತನ್ನ ಸ್ವಂತ ದುಡಿಮೆಯಿಂದ ಗೋಕಾಕಿನ ಸರ್ವೆ ನಂ.149/ಬಿ ನಲ್ಲಿ ಒಂದು ನಿವೇಶನ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ವಾದಿಯ ಸ್ವಾಯರ್ಜಿತ ಆಸ್ತಿ ಎಂದರೆ ಸರಿಯಲ್ಲ. ವಾದಿ ಖರೀದಿ ಮಾಡಿದ ನಿವೇಶನದ ಖರೀದಿ ಪತ್ರದ ಧೃಡೀಕೃತ ನಕಲನ್ನು ನಾನೇ ಹಾಜರ ಮಾಡಿರುತ್ತೇನೆ ಎಂದರೆ ಸರಿ. ಸದರಿ ನಿವೇಶನ ಖರೀದಿ ಮಾಡುವ ಸಮಯದಲ್ಲಿ ವಾದಿ ಏನು ಕೆಲಸ ಮಾಡುತ್ತಿದ್ದರು ಅದನ್ನು ಖರೀದಿ ಪತ್ರದಲ್ಲಿ ನಮೂದಿಸಿದ್ದಾರೆ ಎಂದರೆ

ಸರಿ. ನಿಡಿ-29 ರಲ್ಲಿ ವಾದಿಯ ಉದ್ಯೋಗ ಶಿಕ್ಷಣ ಮತ್ತು ವ್ಯಾಪಾರ ಎಂದು ಬರೆಯಲಾಗಿದೆ ಎಂದರೆ ಸರಿ.

15. ಸದರಿ ಆಸ್ತಿ ಖರೀದಿ ಮಾಡಲು ನಮ್ಮ ತಂದೆ ಯಾವುದೇ ಹಣ ತೊಡಗಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಸದರಿ ಆಸ್ತಿ ಖರೀದಿ ಮಾಡಲು ಹಣ ಕೊಟ್ಟಿದ್ದಾರೆ ಎಂದು ನಮ್ಮ ಬಾಯಿ-ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆ ಇರುವುದಿಲ್ಲ ಎಂದರೆ ಸರಿ. ನಮ್ಮ ತಂದೆ ಮೈನುದ್ದೀನ ಇವರು ವಾದಿಯ ಹೆಸರಿನಲ್ಲಿ ನಿವೇಶನ ಖರೀದಿ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. ವಾದಿ ತಮ್ಮ ಸ್ವಸಂಪಾದನೆಯಿಂದ ಖರೀದಿ ಮಾಡಿದ ಆಸ್ತಿಯಲ್ಲಿ ನನಗೆ ಮತ್ತು ಉಳಿದ ಪ್ರತಿವಾದಿಯರಿಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ವಾದಿಯ ಸ್ವಸಂಪಾದನೆಯಿಂದ ಖರೀದಿ ಮಾಡಿದ ಆಸ್ತಿಯಾಗಿದ್ದರಿಂದ ಅದನ್ನು ಈ ದಾವೆಯಲ್ಲಿ ಸೇರಿಸುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ.

17. ನಾನು, ವಾದಿ ಮತ್ತು ಉಳಿದ ಪ್ರತಿವಾದಿಯರು ಎಲ್ಲ ಆಸ್ತಿಯಲ್ಲಿ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇದ್ದೇವೆ ಎಂದರೆ ಸಾಕ್ಷಿದಾರರು ಐಟಂ.ನಂ.6 ನ್ನು ಹೊರತುಪಡಿಸಿ ಉಳಿದ ಆಸ್ತಿಗಳಲ್ಲಿ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇರುವುದಾಗಿ ಹೇಳುತ್ತಾರೆ. ವಾದಿ ಐಟಂ ನಂ.6ರಲ್ಲಿಯು ಸಹ

ನಮ್ಮ ಜೊತೆ ಸಾಮೂಹಿಕ ಕಬ್ಜೆ ವಹಿವಾಟಿಯಲ್ಲಿ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

18. ನಮ್ಮ ತಂದೆಯ ಮರಣಾ ನಂತರ ನಮ್ಮ ತಂದೆಯ ಆಸ್ತಿಗಳಿಗು ವಾರಸಾ ಮಾಡುವ ಉದ್ದೇಶದಿಂದ ನಮ್ಮ ತಾಯಿಯ ಬಳಿ ನಮ್ಮ ತಂದೆಯ ಮರಣ ಪ್ರಮಾಣ ಪತ್ರ ಕೇಳಿದ್ದರು ಎಂದರೆ ಸರಿಯಲ್ಲ. ವಾದಗೆ ನಾನು ಮತ್ತು ಪ್ರತಿವಾದಿ 1 ನಮ್ಮ ತಂದೆಯ ಮರಣ ಉತಾರ ಕೊಡಲು ನಿರಾಕರಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಮರಣ ಉತಾರವನ್ನು ನಾವು ಕೊಡುವುದಿಲ್ಲ ಎಂದು ನಿರಾಕರಿಸಿದ್ದರಿಂದ ನಮ್ಮ ತಾಯಿ ಪಿಂಚಣಿ ಪಡೆಯಲು ಸಲ್ಲಿಸಿದ ಅರ್ಜಿಗೆ ಲಗತ್ತಿಸಿದ ಮರಣ ಪ್ರಮಾಣ ಪತ್ರದ ಪ್ರತಿಯನ್ನು ಕೊಡಬೇಕು ಎಂದು ಸಂಬಂಧಪಟ್ಟ ಟ್ರೇಜರಿ ಕಚೇರಿ ಮತ್ತು ಸಿಂಡಿಕೇಟ ಬ್ಯಾಂಕಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ವಾದಿ ಟ್ರೇಜರಿ ಕಚೇರಿಗೆ ಮತ್ತು ಸಿಂಡಿಕೇಟ ಬ್ಯಾಂಕಗೆ ಅರ್ಜಿ ಕೊಟ್ಟ ಬಗ್ಗೆ ಮತ್ತು ಸದರಿಯವರು ವಾದಿಯ ಅರ್ಜಿಗೆ ಹಿಂಬರಹ ಕೊಟ್ಟ ಬಗ್ಗೆ ವಾದಿ ದಾಖಲೆಗಳನ್ನು ಹಾಜರಪಡಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಅರ್ಜಿ ಕೊಟ್ಟಿದ್ದರೂ ಸಹ ಟ್ರೇಜರಿ ಕಚೇರಿಯವರು ಮತ್ತು ಸಿಂಡಿಕೇಟ ಬ್ಯಾಂಕನವರು ವಾದಿಗೆ ನಮ್ಮ ತಂದೆಯ ಮರಣ ಉತಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ.

19. ನಮಗು ಮತ್ತು ವಾದಿಗು ಈ ಹೊಂದಾಣಿಕೆ ಆಗದೇ ಇದ್ದುದ್ದರಿಂದ ದಾವಾ ಆಸ್ತಿಗಳಲ್ಲಿ ವಾದಿಗು ಸಹ ಪಾಲು ಕೊಡಬೇಕು ಎಂದು ಹೇಳಿ ವಾದಿ

ಹಿರಿಯರನ್ನು ಕರೆದುಕೊಂಡು ನಮ್ಮ ಬಳಿ ಬಂದಿದ್ದರು ಎಂದರೆ ಸರಿಯಲ್ಲ. ನಾವು ವಾದಿಗೆ ಪಾಲು ಕೊಡಲು ನಿರಾಕರಿಸಿದ್ದರಿಂದ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಬೇಕೆನ್ನುವ ಒಂದೇ ಉದ್ದೇಶದಿಂದ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ